**O.S. 75-24 PW : 1**

**ಸತ್ಯ ಪ್ರತಿಜ್ಞೆ ಮೇರೆಗೆ ದಿನಾಂಕಃ 13.01.2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಂದುವರೆದ ಪಾಟೀ ಸವಾಲುಃ ಪ್ರತಿವಾದಿ ಪರ ಶ್ರೀ G C B, ವಕೀಲರಿಂದಃ**

4. ನನ್ನ ಗಂಡ 1992 ರಲ್ಲಿ ಮರಣ ಹೊಂದಿದ್ದಾರೆ ಅಂದರೆ ಸರಿ. ಅವರಿಗೆ ಬ್ರೇನ್ ಟ್ಯೂಮರ ಆಗಿತ್ತು ಅಂದರೆ ಸರಿ. ಹುಬ್ಬಳ್ಳಿಯ ಯಳಮಲಿ ಆಸ್ಪತ್ರೆಯಲ್ಲಿ ದಾಖಲಾಗಿ ಮರಣ ಹೊಂದಿದ್ದಾರೆ ಅಂದರೆ ಸರಿ. ಆಗ ನನ್ನ ಮಗನ ವಯಸ್ಸು 1 ತಿಂಗಳ ಕಡಿಮೆ 2 ವರ್ಷ ಇತ್ತು. ನನ್ನ ಗಂಡ ಮರಣ ಹೊಂದಿದ ನಂತರ ನಾನು ಮಗನ ಜೊತೆಗೆ ತವರು ಮನೆ ಅಗಡಿ ಗ್ರಾಮದಲ್ಲಿದ್ದೆನು ಅಂದರೆ ಸರಿಯಲ್ಲ. ಮಲ್ಲಪ್ಪ ಭೀಮಪ್ಪ ಪೂಜಾರ ರವರು ಗೊತ್ತು. ಮಲ್ಲಪ್ಪ ಭೀಮಪ್ಪ ಪೂಜಾರ ರವರು ನನ್ನ ಹಾಗೂ ಪ್ರತಿವಾದಿಗಳ ವಿರುದ್ಧ ಅಸಲು ದಾವೆ ನಂಃ 399/2019 ನ್ನು ಸಲ್ಲಿಸಿದ್ದರು ಅಂದರೆ ಸರಿ. ಸದರಿದಾವೆಯಲ್ಲಿ ನಾನು ಸಾಕ್ಷಿ ನುಡಿದಿದ್ದೇನೆ ಅಂದರೆ ಸರಿ. ನಾನು ಸದರಿ ದಾವೆಯಲ್ಲಿ ನುಡಿದ ಸಾಕ್ಷಿ ಸತ್ಯವಾಗಿವೆ ಅಂದರೆ ಸರಿ. ನನ್ನ ಗಂಡ ಮರಣ ಹೊಂದಿದ ನಂತರ ನಾನು, ನನ್ನ ಎರಡು ವರ್ಷದ ಮಗನ ಜೊತೆಗೆ ತವರು ಮನೆ ಅಗಡಿ ಗ್ರಾಮದಲ್ಲಿ ವಾಸವಾಗಿದ್ದೇನೆ ಅಂದರೆ ಸರಿಯಲ್ಲ. ನಾನು ವಾಸವಾಗಿದ್ದರೂ ಸಹ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ. ನನ್ನ ಅಣ್ಣ ನೀಲಕಂಠಗೌಡ ನ ಮದುವೆ ದಿಃ 19.4.1998 ರಂದು ಆಗಿದೆ ಅಂದರೆ ನೆನಪಿಲ್ಲ. ಮದುವೆ 1998 ರಲ್ಲಿ ಆಗಿರಬಹುದು. ನಮ್ಮ ಅಣ್ಣ ನೀಲಕಂಠಗೌಡ ಮದುವೆಯಾಗಿ 3 – 4 ತಿಂಗಳ ತಂದೆ - ತಾಯಿ ಜೊತೆಗೆ ಅಗಡಿ ಗ್ರಾಮದಲ್ಲಿದ್ದರು ಅಂದರೆ ಸರಿ. ನೀಲಕಂಠಗೌಡ ನ ಹೆಂಡತಿ ನನಗೆ ಹಾಗೂ ನನ್ನ ತಂದೆ - ತಾಯಿ ಗಳಿಗೆ ಆಗಿ ಬರದ ಕಾರಣ ಅವರು, ಕೃಷ್ಣಾಪೂರ ಓಣಿಯಲ್ಲಿ ಭಾಡಿಗೆ ಮನೆಯಲ್ಲಿ ವಾಸವಾಗಿದ್ದರು ಅಂದರೆ ಸರಿ. 1998 ರಲ್ಲಿ ನಮ್ಮ ತಂದೆ ಇಬ್ಬರೂ ಗಂಡು ಮಕ್ಕಳಿಗೆ ಒಟ್ಟು ಕುಟುಂಬದ ಆಸ್ತಿ ಹಂಚಿಕೆ ಮಾಡಿದರು ಅಂದರೆ ಸರಿ. ಆ ಪ್ರಕಾರ 1 ನೇ ಆಸ್ತಿಯಲ್ಲಿ 8 ಎಕರೆ 10 ಗುಂಟೆ 1 ನೇ ಪ್ರತಿವಾದಿ ಈಗಲೂ ಸಾಗುವಳಿ ಮಾಡುತ್ತಿದ್ದಾರೆ ಅಂದರೆ ಸರಿ. ದಾವಾ ಆಸ್ತಿ ಶೆಡ್ಯೂಲ್ - ಬ, 13 ಗುಂಟೆ ಪೈಕಿ 9 ಗುಂಟೆಯನ್ನು 1 ನೇ ಪ್ರತಿವಾದಿ ಸಾಗುವಳಿ ಮಾಡುತ್ತಿದ್ದಾರೆ ಅಂದರೆ ಸರಿ. ಅದರಲ್ಲಿ ಉಳಿದ 4 ಗುಂಟೆ ನಮ್ಮ ಚಿಕ್ಕಪ್ಪ ಶಂಕರಗೌಡನಿಗೆ ಸಂಬಂಧಪಟ್ಟಿದೆ ಅಂದರೆ ಸರಿ. ಶಂಕರಗೌಡನನ್ನು ರಾೀ ದಾವೆಯಲ್ಲಿ ಪಕ್ಷಗಾರರನ್ನಾಗಿ ಮಾಡಿಲ್ಲ ಅಂದರೆ ಸರಿ. ಅದೇ ಪ್ರಕಾರ ದಾವಾ ಶೆಡ್ಯೂಲ್ - ಅ ಆಸ್ತಿಯಲ್ಲಿ 3 ಎಕರೆ 12 ಗುಂಟೆ ಜಮೀನನ್ನು 2 ನೇ ಪ್ರತಿವಾದಿಗಳಿಗೆ ಬಂದಿದ್ದು, ಅದನ್ನೆ ಅವರೆ ಸಾಗುವಳಿ ಮಾಡುತ್ತಿದ್ದಾರೆ ಅಂದರೆ ಸರಿ.

**O.S. 75-24** **PW : 1**

ದಾವಾ ಶೆಡ್ಯೂಲ್ - ಕ ಆಸ್ತಿಯನ್ನು 2 ನೇ ಪ್ರತಿವಾದಿಗೆ ಬಂದಿದ್ದು, ಅದನ್ನು ಅವರೆ ಸಾಗುವಳಿ ಮಾಡುತ್ತಿದ್ದಾರೆ ಅಂದರೆ ಸರಿ. 2 ನೇ ಪ್ರತಿವಾದಿ ಕೋಟೆಪ್ಪನ ಮದುವೆ 2006 ರಲ್ಲಿ ಆಗಿದೆ ಅಂದರೆ ಸರಿ. 2 ನೇ ಪ್ರತಿವಾದಿ ಮದುವೆಯಾದ ನಂತರ ಆತನ ಹೆಂಡತಿಗೂ ಹಾಗೂ ನಮಗೂ ಮತ್ತು ತಂದೆ - ತಾಯಿಗಳಿಗೆ ಹೊಂದಾಣಿಕೆ ಬರದ ಕಾರಣ, ನಮ್ಮ ತಂದೆ ಹುಬ್ಬಳ್ಳಿಯ ನಾಗಶೆಟ್ಟಿಕೊಪ್ಪ ದಲ್ಲಿ ಭಾಡಿಗೆ ಮನೆ ಮಾಡಿಕೊಂಡು ಇದ್ದರು ಅಂದರೆ ಸರಿ. ನಾಗಶೆಟ್ಟಿಕೊಪ್ಪ ದಲ್ಲಿ ನಮ್ಮ ತಂದೆ ದಿಃ 3.10.2016 ರಂದು ಮರಣ ಹೊಂದಿದ್ದಾರೆ ಅಂದರೆ ಸರಿ. ನಮ್ಮ ತಂದೆ ಮರಣ ಹೊಂದಿದ ನಂತರ ನಾಗಶೆಟ್ಟಿಕೊಪ್ಪ ದ ಭಾಡಿಗೆ ಮನೆಯಲ್ಲಿ ನಾನು ಹಾಗೂ ನಮ್ಮ ತಾಯಿ 5 – 6 ತಿಂಗಳು ಇದ್ದೆವು. ನಂತರ, ನಾನು ಹಾಗೂ ನನ್ನ ತಾಯಿ ಗಂಡನ ಊರು ಹುಲಗೂರಿಗೆ ಹೋದೆವು ಅಂದರೆ ಸರಿ. 1998 ರಲ್ಲಿ ನಮ್ಮ ತಂದೆ ಮಾಡಿದ ತೊಂಡಿ ವಾಟ್ನಿ ಬಗ್ಗೆ ಒಂದು ದಾಖಲೆ ಮಾಡಿದ್ದರು ಅಂದರೆ ಗೊತ್ತಿಲ್ಲ. ಸದರಿ ದಾಖಲೆಗೆ ಸಾಕ್ಷಿದಾರರ ಸಮಕ್ಷಮ ನಾನು ಸಹಿ ಮಾಡಿದ್ದೇನೆ ಅಂದರೆ ಸರಿ. ನನ್ನ ತಂದೆ ಜೀವಂತವಿದ್ದಾಗ ವಿಜಯ ಬ್ಯಾಂಕಿನಲ್ಲಿ ಬೆಳೆ ಸಾಲ ಮಾಡಿದ್ದರು ಅಂದರೆ ಗೊತ್ತಿಲ್ಲ. ಅದೇ ರೀತಿ ಅಗಡಿ ಕೋ-ಆಪರೇಟಿವ್ ಸೊಸೈಟಿಯಲ್ಲಿ ಸಾಲ ಮಾಡಿದ್ದರು ಅಂದರೆ ಗೊತ್ತಿಲ್ಲ. ಆಗಿನ ವಿಜಯ ಬ್ಯಾಂಕ ಈಗ ಬ್ಯಾಂಕ ಆಫ್ ಬರೋಡ ಆಗಿದೆ, ನಮ್ಮ ತಂದೆ ಮಾಡಿದ ಸಾಲವು ಈಗ 18 ಲಕ್ಷ ರೂ. ಆಗಿರಬಹುದು. ಅಗಡಿ ಕೋ-ಆಪರೇಟಿವ್ ಸೊಸೈಟಿಯಲ್ಲಿ 3 ಲಕ್ಷ ರೂ. ಸಾಲ ಇರಬಹುದು. ಬ್ಯಾಂಕ ಆಫ್ ಬರೋಡ ಹಾಗೂ ಅಗಡಿ ಕೋ-ಆಪರೇಟಿವ್ ಸೊಸೈಟಿಯನ್ನು ಈ ದಾವೆಯಲ್ಲಿ ಪಕ್ಷಗಾರರನ್ನಾಗಿ ಮಾಡಿಲ್ಲ ಅಂದರೆ ಸರಿ. ನಮ್ಮ ತಂದೆ ಮರಣ ಹೊಂದಿದ ನಂತರ ತಾಯಿಗೆ ಪಿಂಚಣಿ ಬರುತ್ತಿದೆ ಅಂದರೆ ಗೊತ್ತಿಲ್ಲ. ನಮ್ಮ ತಂದೆಗೆ ನಿವೃತ್ತಿ ನಂತರ ಪಿಂಚಣಿ ಬಂದಿಲ್ಲ. ನಮ್ಮ ತಂದೆಗೆ ನಿವೃತ್ತಿ ನಂತರ ಪಿಂಚಣಿ ಬರುತ್ತಿತ್ತು ಅಂದರೆ ಸರಿಯಲ್ಲ. ನಮ್ಮ ತಂದೆ ಮರಣದ ನಂತರ ತಾಯಿಗೆ ಪಿಂಚಣಿ ಬರುತ್ತಿತ್ತು ಅಂದರೆ ಸರಿಯಲ್ಲ. ಪಿಂಚಣಿ ಬರುತ್ತಿದ್ದರೂ ಸಹ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ. ಮಲ್ಲಪ್ಪ ಪೂಜಾರಿ ರವರಿಗೆ ನಾನು ಹಾಗೂ ನನ್ನ ತಂದೆ 2 ಎಕರೆ ಜಮೀನನ್ನು ಕ- ಆಸ್ತಿಯಲ್ಲಿ ಮಾರಾಟ ಮಾಡುತ್ತೇವೆ ಅಂತಾ ಖರೀದಿ ಕರಾರು ಪತ್ರವನ್ನು ಬರೆದುಕೊಟ್ಟಿದ್ದೇವೆಂದು ದಾವೆ ಸಲ್ಲಿಸಿದ್ದೇವೆ ಅಂದರೆ ಸರಿ. ಈ ದಾವೆಯ ಪ್ರತಿವಾದಿ 1 ಹಾಗೂ 2 ರವರು ಅದು ಸುಳ್ಳು ಅಂತಾ ಹೋರಾಟ ಮಾಡಿದ್ದಾರೆ ಅಂದರೆ ಸರಿ. ಈಗ ಅದು ಮಾನ್ಯ ಉಚ್ಚ ನ್ಯಾಯಾಲಯದಲ್ಲಿ ಕೇಸ ಬಾಕಿ ಇದೆ ಅಂದರೆ ಸರಿ.

**O.S. 75-24** **PW : 1**

ಮಲ್ಲಪ್ಪ ಪೂಜಾರಿ ರವರನ್ನು ದಾವೆಯಲ್ಲಿ ಪಕ್ಷಗಾರರನ್ನಾಗಿ ಮಾಡಿಲ್ಲ ಅಂದರೆ ಸರಿ. ಪ್ರತಿವಾದಿ 1 ಹಾಗೂ 2 ರವರು ದಾವಾ ಕ-ಆಸ್ತಿಯಲ್ಲಿ ಮಾರಾಟ ಮಾಡಲು ನನಗೆ ಹಾಗೂ ನನ್ನ ತಾಯಿಗೆ ಅಧಿಕಾರವಿಲ್ಲವೆಂದು ಹೋರಾಟ ಮಾಡಿದ್ದಾರೆ ಅಂದರೆ ಸರಿ. ನನ್ನ ತಾಯಿ ಕರಾರು ಪತ್ರವನ್ನು ಮಾಡಿಕೊಟ್ಟಿಲ್ಲ, ಸೃಷ್ಟಿ ಮಾಡಿದ್ದಾರೆಂದು ಹೇಳಿದ್ದರು ಅಂದರೆ ಸರಿಯಲ್ಲ. ಮಗನ ಹೆಸರು ಅಮೃತಗೌಡ. ಮಲ್ಲಪ್ಪ ಪೂಜಾರಿ ರವರು ನಮ್ಮ ತಂದೆ ಮರಣ ಹೊಂದಿದಾಗಿನಿಂದ ಗೊತ್ತು. ಮಲ್ಲಪ್ಪ ಪೂಜಾರಿ ರವರ ಮಗ ಹಾಗೂ ನಮ್ಮ ಮಗ ಗೆಳೆಯರು ಅಂದರೆ ಸರಿ. ನನ್ನ ಮಗನ ಸಾಲದ ಸಲುವಾಗಿ ನನಗೆ ಹಾಗೂ ನನ್ನ ತಾಯಿಗೆ ಯಾವುದೇ ಅಧಿಕಾರವಿಲ್ಲದಿದ್ದರೂ ಸಹ ಮಲ್ಲಪ್ಪ ಪೂಜಾರಿ ರವರ ಪರವಾಗಿ ಖರೀದಿ ಕರಾರು ಪತ್ರವನ್ನು ಸೃಷ್ಟಿ ಮಾಡಿದ್ದೇವೆ ಅಂದರೆ ಸರಿಯಲ್ಲ. ಈಗಾಗಲೇ ವಿಭಾಗವಾಗಿದ್ದರಿಂದ ದಾವಾ ಆಸ್ತಿ ಮೇಲೆ ನಮಗೆ ಹಕ್ಕು ಇಲ್ಲ ಅಂದರೆ ಸರಿಯಲ್ಲ. ಮಲ್ಲಪ್ಪ ಪೂಜಾರಿ ರವರು ಸಲ್ಲಿಸಿದ ದಾವೆ ಮಾನ್ಯ ಉಚ್ಚ ನ್ಯಾಯಾಲಯದಲ್ಲಿ ತಡೆಯಾಜ್ಞೆ ನೀಡಲಾಗಿದೆ ಅಂದರೆ ಸರಿ. ಮಾನ್ಯ ಉಚ್ಚ ನ್ಯಾಯಾಲಯವು ತಡೆಯಾಜ್ಞೆ ನೀಡಿದ್ದರಿಂದ ಇ ಪಿ ನಂಃ 160/2020-23 ಬಾಕಿ ಇದೆ ಅಂದರೆ ಸರಿ. ಮಲ್ಲಪ್ಪ ಪೂಜಾರಿ ರವರು ಹಣಕ್ಕೆ ಸತಾಯಿಸಿದ್ದರಿಂದ ಸುಳ್ಳು ದಾವೆ ಸಲ್ಲಿಸಿ, ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ. ಮಲ್ಲಪ್ಪ ಪೂಜಾರಿ ರವರ ಹೇಳಿಕೆಗಳ ಮೇರೆಗೆ ದಾವೆ ಸಲ್ಲಿಸಿದ್ದೇನೆ ಅಂದರೆ ಸರಿಯಲ್ಲ.

**ಮರು ವಿಚಾರಣೆಃ ಇಲ್ಲಾ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು.)

ಓ.ಹೇ.ಕೆ.ಸ.ಎ. ಒಪ್ಪಿಕೊಳ್ಳಲಾಯಿತು.

ಪ್ರಧಾನ ಹಿರಿಯ ದಿವಾಣಿ ನ್ಯಾಯಾಧೀಶರು
ಹಾಗೂ ಜೆ ಎಂ ಎಫ್ ಸಿ, ಹುಬ್ಬಳ್ಳಿ.